ಓ ಎಸ್**: 60/2017** ಪಿ. ಡಬ್ಲ್ಯೂ-1

ಸಾಕ್ಷಿಯನ್ನು ದಿಃ **30.08.2021** ರಂದು ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಾದಿ ಪರ ವಕೀಲರಾದ ಶ್ರೀ ಪಿ ಎಸ್ ವಕೀಲರಿಂದಃ**

ಮರಿಸ್ವಾ ಮಿ ಬಿನ್ ಮರಿಲಿಂಗಶೆಟ್ಟಿ, ವಯಸ್ಸು **64** ವರ್ಷ, ನಾನು ಈ ದಾವೆಯಲ್ಲಿ ವಾದಿಯಾಗಿದ್ದು, ನನ್ನ ಮುಖ್ಯ ವಿಚಾರಣೆಯ ಪ್ರಮಾಣಪತ್ರವನ್ನು ಸಲ್ಲಿಸಿರುತ್ತೇನೆ. ಸದರಿ ಪ್ರಮಾಣ ಪತ್ರದಲ್ಲಿ ಹೇಳಿರುವ ಎಲ್ಲಾ ಅಂಶಗಳು ಸತ್ಯವಾಗಿರುತ್ತದೆ. ಅದನ್ನು ನಾನೇ ನಮ್ಮ ವಕೀಲರಿಗೆ ಹೇಳಿ ಬರೆಸಿರುತ್ತೇನೆ. ಅದರಲ್ಲಿರುವ ಸಹಿ ನನ್ನದ್ದೇ ಆಗಿರುತ್ತದೆ. ಈ ದಾವೆಯನ್ನು ಡಿಕ್ರಿ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಸರ್ವೆ ನಂಬರ್ **837/1** ಆಸ್ತಿಗೆ ಸಂಬಂಧಿಸಿದ ಎರಡು ಪುಟಗಳ ಒಂದು ಆರ್ ಟಿ ಸಿ ಯನ್ನು ನಿಪಿ.**1** ಎಂದು, ಸರ್ವೆ ನಂಬರ್ **837/2** ಆಸ್ತಿಗೆ ಸಂಬಂಧಿಸಿದ ಎರಡು ಪುಟಗಳ ಒಂದು ಆರ್ ಟಿ ಸಿ ಯನ್ನು ನಿಪಿ.**2** ಎಂದು, ಸರ್ವೆ ನಂಬರ್ **578/1** ಎ ಆಸ್ತಿಗೆ ಸಂಬಂಧಿಸಿದ ಒಂದು ಆರ್ ಟಿ ಸಿ ಯನ್ನು ನಿಪಿ.**3** ಎಂದು, ವಂಶವೃಕ್ಷ ಪ್ರಮಾಣಪತ್ರವನ್ನು ನಿಪಿ.**4** ಎಂದು ಗುರುತಿಸಲಾಯಿತು.

ಮುಂದುವರೆದ ಮುಖ್ಯ ವಿಚಾರಣೆಗೆ ಮುಂದೂಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಈ ಮೇಲೆ ಸಾಕ್ಷಿ ಹೇಳಿದ ಸಾಕ್ಷ್ಯವನ್ನು ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿದ ನಂತರ, ಓದಿ ಹೇಳಿದ ಮೇರೆಗೆ ಸಾಕ್ಷಿ ಸರಿ ಇದೆ ಎಂದು ಒಪ್ಪಿ ತಮ್ಮ ಸಹಿ ಮಾಡಿರುತ್ತಾರೆ.)

ಓ ಹೇ ಕೇ ಸ ಇದೆ

ಹೆಚ್ಚುವರಿ ಸಿವಿಲ್ ನ್ಯಾಯಾಲಯ ಮತ್ತು
ಜೆ.ಎಂ.ಎಫ್.ಸಿ. ತಿ.ನರಸೀಪುರ